ದಿನಾಂಕಃ 06-07-2026. ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು : ಶ್ರೀ.ಎ.ಬಿ.ಯು.ವಾದಿ ಪರ ವಕೀಲರಿಂದ.**

ನನ್ನ ಅಕ್ಕನ ಗಂಡ ರಮೇಶ ಸೂರೇಬಾನ ಇತನು ಸರಸ್ವತಿ ಎಂಬ ಮಹಿಳೆ ಜೊತೆ 1 ನೇ ಮದುವೆಯಾಗಿದ್ದನು ಎಂದೆರ ಸರಿ. ಸರಸ್ವತಿ ಇವಳಿಗೆ ಮಕ್ಕಳು ಆಗದ ಕಾರಣ ರಮೇಶ ಸುರೇಬಾನ ವಾದಿಗೆ ಮದುವೆಯಾಗಿರುತ್ತಾನೆ ಎಂದರೆ ಸರಿ. ನನ್ನ ಅಕ್ಕ ವಾದಿಗೆ ಮಕ್ಕಳಾಗಿರುವುದಿಲ್ಲ. ರಮೇಶ ಸೂರೇಬಾನ ಇತನ 1 ನೇ ಹೆಂಡತಿ ಸರಸ್ವತಿ ಇವಳು 28-03-2023 ರಂದು ಮರಣ ಹೊಂದಿರುತ್ತಾಳೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮಾವ ರಮೇಶ ಸೂರೇಬಾನ ಇತನು 2022 ರಲ್ಲಿ ಮರಣ ಹೊಂದಿರುತ್ತಾನೆ. ದಾವಾ ಸ್ವತ್ತಿನ ಸಿ.ಟಿ.ಎಸ್ ನಂ115/2 ಆಗಿರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ಬಂಟಾರವರ ಮನೆ, ಪಶ್ಚಿಮಕ್ಕೆ 115/1 ಎ/1 ಆಸ್ತಿ ಇರುತ್ತದೆ, ದಕ್ಷಿಣಕ್ಕೆ 115/ಎ, ಉತ್ತರಕ್ಕೆ ಪುರಸಭೆಯ ಆಸ್ತಿ ಇರುತ್ತದೆ.

ರಮೇಶ ಸೂರೇಬಾನ ಇರುವ ಒಟ್ಟು 5 ಜನ ಒಡಹುಟ್ಟಿದ ಸಹೋದರರು ಇರುತ್ತಾರೆ ಎಂದರೆಸರಿ. ರಮೇಶ ಸೂರೇಬಾನ ಇವಳ ಸಹೋದರರೆಲ್ಲರೂ ವಾಟ್ನಿ ಮಾಡಿಕೊಂಡು ಬೇರೆ ಬೇರೆ ವಾಸವಿರುತ್ತಾರೆ ಎಂದರೆ ಸರಿ. ರಮೇಶ ಸೂರೇಬಾನ ಇವರ ಮರಣಾ ನಂತರ ವಾದಿಯರ ದೇಕರೆಕಿ ನಾನು ಮಾಡಿರುತ್ತೇನೆ. ವಾದಿಯನ್ನು 2 ವರ್ಷಗಳ ಕಾಲ ನನ್ನ ಹತ್ತಿರ ಇಟ್ಟಕೊಂಡಿದ್ದೇನು. ನಾನು ಹೋಸಪೇಟೆಯ ಸ್ವಂತ ಮನೆಯಲ್ಲಿ ವಾಸವಿದ್ದೇನೆ. ನಾನು ಹೋಮಗಾರ್ಡ ಕೆಲಸ ಮಾಡುತ್ತಿದ್ದೆ ಈಗ ಅಡಿಗೆ ಮಾಡುವ ಕೆಲಸಕ್ಕೆ ಹೋಗುತ್ತೇನೆ. ನನಗೆ ದಿನಕ್ಕೆ ರೂ.800/- ಸಂಭಂಳ ಇರುತ್ತದೆ. ನಾನು ಹೋಮಗಾರ್ಡ ಇದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿಲ್ಲ. ನನಗೆ ದಿವಸಕ್ಕೆ ರೂ.800/- ಸಂಬಂಳ ಇದ್ದ ಬಗ್ಗೆ ದಾಖಲಾತಿಯನ್ನು ಹಾಜರುಮಾಡಿರುವುದಿಲ್ಲ. ನನ್ನ ಅಕ್ಕ ವಾದಿಗೆ ಮದುಮೇಹ, ರಕ್ತದೊತ್ತಡ, ಸಂದಿವಾತ, ಪಾಶ್ವವಾಯು ರೋಗ ಇರುತ್ತದೆ.

ವಾದಿ ನನ್ನ ಹತ್ತಿರ ಹೋಸಪೇಟೆಯಲ್ಲಿ 3 ತಿಂಗಳುಗಳ ಕಾಲ ಇದ್ದಳು. ಹೊಸಪೇಟೆಯಲ್ಲಿ ಆಸ್ಪತ್ರೆಗಳು ಇವೆ. ವಾದಿಗೆ 2022 ರಿಂದ ಬಾದಾಮಿಯ ಕಾರೂಡಗಿಮಠ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇನೆ. ಪ್ರತಿ ತಿಂಗಳು ನಾನು ವಾದಿಗೆ ಹೊಸಪೇಟೆಯಿಂದ ಬಂದು ಕಾರೂಡಗಿಮಠ ಆಸ್ಪತ್ರೆಗೆ ತೋರಿಸಿ ವಾಪಸ ಹೊಸಪೇಟೆಗೆ ಹೋಗುತ್ತಿದ್ದೆ. ತಿಂಗಳಿಗೆ ಒಂದು ಭಾರಿ ಈ ರೀತಿ 2 ವರ್ಷಗಳ ಕಾಲ ವಾದಿಗೆ ಚಿಕಿತ್ಸೆ ಕೊಡಿಸಿರುತ್ತೇನೆ. ವಾದಿಯ ಚಿಕಿತ್ಸಾ ಖರ್ಚನ್ನು ನಾನೇ ಭರಿಸಿರುತ್ತೇನೆ. ಪ್ರತಿ ತಿಂಗಳು ಸುಮಾರು ರೂ.2.500 ರಿಂದ 3000 ರವರೆಗೆ ಖರ್ಚು ಭರಿಸಿರುತ್ತೇನೆ. ವೈದ್ಯಕೀಯ ದಾಖಲಾತಿ ನನ್ನ ಹತ್ತಿರು ಇರುತ್ತದೆ. ನನ್ನ ಅಕ್ಕನ ಗಂಡ ರಮೇಶ ಸೂರೇಬಾನ ಇವರು ಮರಣ ಹೊಂದಿದಾಗ ಆತನ ಹೆಸರಿನಲ್ಲಿ ಎಫ್.ಡಿ ಇತ್ತು ಎಂದರೆ ಸರಿ. 4 ತೊಲೆ ಚಿನ್ನಾಭಾರಣ ಇತ್ತು ಎಂದರೆ ಸಾಕ್ಷಿಯು

ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಫ್.ಡಿ ನಾನು ತೆಗೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ವಾದಿಯ ಹೆಸರಿನಲ್ಲಿ ವಾರಸಾ ನಾನೇ ಮಾಡಿಸಿರುತ್ತೇನೆ. ವಾದಿಯ ವಾರಸ ಮಾಡಿಸಲು ವಾದಿಯ ಸಹಿ ಪಡೆದಿರುತ್ತೇನೆ ಎಂದರೆ ಸರಿ. ಅವಶ್ಯಕತೆ ಇದ್ದಾಗ ವಾದಿಯ ಸಹಿ ನಾನು ಪಡೆಯುತ್ತಿದ್ದೆ ಎಂದರೆ ಸರಿ. ವಾದಿ ನನ್ನ ನಂಬಿಕೆಯ ಮೇಲೆ ಸಹಿ ಮಾಡುತ್ತಿದ್ದರು ಎಂದರೆ ಸರಿ. ಎಫ್.ಡಿ ರೂ.50,000/- ಸದರಿ ನಂಬಿಕೆ ಆಧಾರ ಮೇಲೆ ಎಫ್.ಡಿ ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ. 2 ನೇ ವಾರ ಜುಲೈ-2024 ರಂದು ವಾದಿ ಹೊಸಪೇಟೆಗೆ ಬಂದಿದ್ದರು ಎಂದರೆ ಸರಿಯಲ್ಲ. ನಿಡಿ-1 ಬಾಂಡ್ ದಿನಾಂಕಃ07-08-2024 ರಂದು ಬರೆಯಲಾಗಿದೆ. ನಿಡಿ-1 ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ನಿಡಿ-1 ನ್ನು ದಿನಾಂಕಃ 07-08-2024 ರಂದು ಬರೆಯಿಸಿ ಅದೇ ದಿನ ನೊಂದಣಿ ಮಾಡಿಸಿರುತ್ತೇವೆ. ನಿಡಿ-1 ಕ್ಕೆ ನನ್ನ ಅತ್ತಿಗೆ ಸುಕನ್ಯ, ನನ್ನ ಅಣ್ಣ ಪಾಂಡುರಂಗ ಇವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ.

ವಾದಿಯನ್ನು ಮೋಸದಿಂದ ಕರೆದುಕೊಂಡು ಬಂದು ನಿಡಿ-1 ರಲ್ಲಿ ಮೊಸದಿಂದ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ.  ನಿಡಿ-1 ಮೋಸದಿಂದ ತಯಾರಿಸಿರುತ್ತೀರಿ ಎಂದು ವಾದಿಯು ದಿಃ07-08-2024 ರಂದು ತಕರಾರು ನೀಡಿರುತ್ತಾರೆ ಎಂದು ವಾದಿ ಪರ ವಕೀಲರು ಸಾಕ್ಷಿಗೆ ದಾಖಲಾತಿ ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ತಕರಾರು ಸಲ್ಲಿಸಿರುತ್ತಾರೆ ಎಂದು ನುಡಿದಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ವಾದಿಯನ್ನು ನನ್ನ ಹತ್ತಿರ ಇಟ್ಟುಕೊಂಡಿದ್ದೆ ಎಂದು ನನ್ನ ಲಿಖಿತ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ವಾದಿಯ ಚಿಕಿತ್ಸೆ ಖರ್ಚು ವೆಚ್ಚ ವಾದಿ ಭರಿಸಿರುತ್ತಾಳೆ ಎಂದರೆ ಸರಿಯಲ್ಲ. ವಾದಿಯ ಚಿಕಿತ್ಸಾ ಖರ್ಚು ವೆಚ್ಚ ನಾನೇ ಭರಿಸಿರುತ್ತೇನೆ ಎಂದು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಿಡಿ-1 ರಿಂದ 24 ಖೊಟ್ಟಿ ರೀತಿಯಿಂದ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ತಲೆ ತುಂಬಿ ಮೋಸದಿಂದ ನಿಡಿ-1 ನ್ನು ನೊಂದಣಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಗುಳೇದಗುಡ್ಡದಲ್ಲಿ ವಾಸವಿರುತ್ತಾರೆ. ಈಗ ವಾದಿಯ ದೆಕರಕಿ ನಾನು ಮಾಡುತ್ತಿಲ್ಲ. ನಿಡಿ-1 ನೊಂದಣಿಯಾದ ಸಕ್ಷಣ ವಾದಿಯನ್ನು ಹೊರಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅತ್ತಿಗೆ ಅಣ್ಣ ಸೇರಿ ಮೋಸದಿಂದ ನಿಡಿ-1 ನ್ನು ಬರೆಯಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕಬ್ಜಾ ವಹಿವಾಟು ವಾದಿ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಿಂದ ವಾದಿ ಹೊರಗೆ ಹಾಕಿದಲ್ಲಿ ವಾದಿ ಬೀದಿಗೆ ಬರುತ್ತಾಳೆ ಎಂದರೆ ಸರಿ. ವಾದಿಗೆ ಬೇರೆ ದಾವಾ ಸ್ವತ್ತು ಹೊರತು ಪಡಿಸಿ ಬೇರೆ ಆಸ್ತಿ ಇಲ್ಲ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ಕಾನೂನು ಬಾಹಿರವಾಗಿ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಅರ್ಜಿದಾರರ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

Sd/-

ಪ್ರಧಾನ ದಿವಾಣಿ ನ್ಯಾಯಾಧೀಶರು ಬದಾಮಿ ಹಾಗೂ
ಸಂಚಾರಿ ನ್ಯಾಯಾಲಯ ಗುಳೇದಗುಡ್ಡ